*ರಮೇಶ್, ಹನುಮನಾಳು*
*ಇಲ್ಲೊಬ್ಬಳಿಗೆ ಓದುವುದಕ್ಕೆ ಬಂದರೂ ಈ ಬಸ್ ಎಲ್ಲಿಗೆ ಹೋಗುತ್ತೆ ಎಂದು ನನ್ನನ್ನು ಕೇಳುವುದೇಕೆ?*



ರಾಂಗ್ ರೂಟ್ ಹೋಗಬಹುದೆಂಬ ಭಯ!

*ರಮೇಶ ಜ. ಬೊಂಗಾಳೆ, ಬೈಲಹೊಂಗಲ*
*ಧಾರ್ಮಿಕತೆ ಇಂದು ಕಡಿಮೆಯಾಗುತ್ತಿದೆಯೇ ಸಾರ್?*
ಬ್ರಹ್ಮಾಂಡದಿಂದ ಭವ್ಯ ಬ್ರಹ್ಮಾಂಡವಾಗಿ ಈಗ ಬೃಹತ್ ಬ್ರಹ್ಮಾಂಡದವರೆಗೆ ಹಬ್ಬಿದೆ!

*ನಾರಾಯಣ, ಗುಗ್ಗರಹಟ್ಟಿ*
*ಅಷ್ಟು ದೊಡ್ಡ ಆನೆಯ ತಲೆ ಇಷ್ಟು ಸಣ್ಣ ಗಣೇಶನ ಕುತ್ತಿಗೆಗೆ ಹೇಗೆ ಹೊಂದಿಕೆಯಾಯಿತು?*
ರೆಡ್ಯೂಸರ್ ಕಾಲರ್ ಉಪಯೋಗಿಸಿದರಂತೆ!

*ಮೊಳಕಾಲ್ಮೂರು ಸುರೇಶ್, ಬಳ್ಳಾರಿ*
*ಲಂಕಾದ ಅಶೋಕವನದಲ್ಲಿ ಕೊರಗಿದ ಸೀತೆಗೆ ಅಗ್ನಿಪ್ರವೇಶದ ಪರೀಕ್ಷೆ ಮಾಡಿದ್ದೇಕೆ ರಾಮ್?*
ಅದು ಪರೀಕ್ಷೆಯಲ್ಲ, ಮೈಗಂಟಿರಬಹುದಾದ ಬ್ಯಾಕ್ಟೀರಿಯಾಗಳ ಇಂಫೆಕ್ಷನ್ ಹೋಗಿಸಲು ನೀಡಿದ ಹೀಟ್ ಟ್ರೀಟ್‌ಮೆಂಟ್!

*ಸುನಂದ ಲೋಕೇಶರೆಡ್ಡಿ, ದಾವಣಗೆರೆ*
*ಈ ಹಿಂದಿನ ಸರ್ಕಾರಗಳು ಕತ್ತಲಿನಿಂದ ಬೆಳಕಿನೆಡೆಗೆ, ಈ ಸರ್ಕಾರ ಬೆಳಕಿನಿಂದ ಕತ್ತಲಿನೆಡೆಗೆ?*



ಪವರ್‌ನಿಂದ ಷಾಕ್‌ನೆಡೆಗೆ!

*ನರಸಿಂಹ ಎಂ. ಪೈ, ಹೊನ್ನಾವರ*
*ಒಂದು ಜೀವದ ಬೆಲೆ ಗೊತ್ತಾಗುವುದು ಯಾವಾಗ?*
ನರ್ಸಿಂಗ್ ಹೋಂನ ಕೊನೆಯ ಬಿಲ್ ಬಂದಾಗ!

*ರೇಷ್ಮಾ ಎ.ಎಸ್. ಬಾಳೆಹೊನ್ನೂರು*
*ಧರ್ಮಪತ್ನಿ ಎನ್ನುವ ಹಾಗೆ ಧರ್ಮಪತಿ ಎಂದೇಕೆ ಹೇಳೋಲ್ಲ?*
ಧರ್ಮಪತಿ ಎಂದರೆ ಮಠಾಧಿಪತಿ ಎಂಬ ಅರ್ಥ ಬರುವುದರಿಂದ!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಊರುಕೋಣ ಮತ್ತು ಕಾಡುಕೋಣಗಳನ್ನು ಒಂದೇ ಬಂಡಿಗೆ ಕಟ್ಟಿದರೆ?*
ಎಡ್ಯೂರಪ್ಪನವರ ಭಾಜಪ ಸರ್ಕಾರದಂತಾಗುತ್ತದೆ!

*ಸೃಜನಾ ಜೈನ್, ಹೂವಿನಹಡಗಲಿ*
*ಎಲ್ಲಿಯವರೆಗೆ ಉತ್ತರದ ಹಗ್ಗ ಹೊಸೆಯುತ್ತೀರಿ?*
ಪೂರ್ವ, ಪಶ್ಚಿಮ, ದಕ್ಷಿಣಗಳ ಹಗ್ಗಗಳು ಸಿಗುವವರೆಗೂ!

*ಎಚ್.ಆರ್. ದೇಸಾಯಿ, ರಾಯಚೂರು*
*ಎಲ್ಲಾ ಋಷಿಗಳು, ಎಲ್ಲಾ ದೇವತೆಗಳು ಭಾರತದಲ್ಲೇ ಏಕೆ ಜನ್ಮವೆತ್ತಿದರು?*
ಬೇರೆ ದೇಶಗಳಲ್ಲಿ ಅವರ ಭಾಷೆ ಇವರಿಗೆ, ಇವರ ಭಾಷೆ ಅವರಿಗೆ ತಿಳಿಯುತ್ತಿರಲಿಲ್ಲವಂತೆ!

*ಆರ್. ಮಧುಸೂದನ್, ಹಾಸನ*
*ಪಕ್ಷದ ಬಲ ಪ್ರದರ್ಶಿಸಲು ಸಮಾವೇಶ, ಸಂಗಾತಿಗೆ ಬಲ ಪ್ರದರ್ಶಿಸಲು?*
Some ಆವೇಶ!

*ವಸಂತಾ ಆನಂದ್, ಕತ್ತರಗುಪ್ಪ*
*ಆಹಾರ ಸೇವಿಸದಿದ್ದರೆ ಕೃಶರಾಗುವುದು ಸಹಜ; ಟೀವಿ ನೋಡದಿದ್ದರೆ?*
ಖುಷಿಯಾಗಿರುವುದು ಸಹಜ!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ಸನ್ಯಾಸಿ ಪೀಠಾಧಿಪತಿಯಾಗುವುದಕ್ಕೂ, ಮಂತ್ರಿ ಮುಖ್ಯಮಂತ್ರಿಯಾಗುವುದಕ್ಕೂ ಏನು ವ್ಯತ್ಯಾಸ?*
ಅವರು ನೀಡುವ ಅರ್ಥಗಳ ಹಾಗೂ ತೀರ್ಥಗಳ ಸ್ವರೂಪ!

*ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ*
*ನಾವು ಕಳುಹಿಸಿದ ಪ್ರಶ್ನೆಗಳಿಗೆ ತಡವಾಗಿ ಉತ್ತರಿಸುವುದೇಕೆ?*
ನಿಮ್ಮ ಗಹನವಾದ ಪ್ರಶ್ನೆಗೆ ದೀರ್ಘಾಲೋಚನೆಯ ಅಗತ್ಯವಿತ್ತು ಡಾಕ್ಟ್ರೇ!

*ವೀರೇಂದ್ರ ಎಂ. ಮೇಗೂರ್, ಧಾರವಾಡ*
*ಪಗಡೆಯಾಟದಲ್ಲಿ ದ್ರೌಪದಿಯನ್ನು ಅಡವಿಟ್ಟ ಪಾಂಡವರಿಗೂ. ಮದ್ಯವ್ಯಸನಕ್ಕಾಗಿ ಮಡದಿಯನ್ನು ಮಾರುವ ಇಂದಿನವರಿಗೂ ಏನು ವ್ಯತ್ಯಾಸ?*
ಅಡವಿಟ್ಟವರು ಶೀಘ್ರವೇ ಅಡವಿಗೆ ಹೋದರು, ಮಾರುವವರು ಶೀಘ್ರವೇ ಮಸಣಕ್ಕೆ ಹೋಗುವರು!

## ಬಹುಮಾನಿತ ಪ್ರಶ್ನೆ

*ಕಂಡಕ್ಟರ್ ರಾಜು, ಗುಬ್ಬಿ*
*ದೇವಸ್ಥಾನಗಳಲ್ಲಿ ಮಹಿಳಾ ಪೂಜಾರಿಗಳನ್ನು ನೇಮಿಸಿದರೆ ಹೇಗೆ?*
ದೇವನ ಅಲಂಕಾರಕ್ಕಿಂತಲೂ ಅವರ ಅಲಂಕಾರವೇ ಹೆಚ್ಚು ಸಮಯ, ಗಮನ ಸೆಳೆಯುತ್ತದೆ.

*ಎನ್.ವಿ. ಶ್ರೀನಿವಾಸ್, ಮೈಸೂರು*
*ಪ್ರತಿಭಟನಾಕಾರರಿಗೆ ರೈಲು ಬಸ್ಸುಗಳನ್ನು ಸುಡಲು ತೈಲ ಎಲ್ಲಿಂದ ಸಿಗುತ್ತದೆ?*
ಎಲ್ಲಿಗೆ ಸಾರ್? ಎಷ್ಟು ಲೀಟರ್ ಬೇಕು?

*ಚಂದ್ರ ಕೆ. ಎಸ್, ಕಾಡ್ಲೆ*
*ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ; ಪ್ರೇಮಿಗಳ ಜಗಳ?*
ಆ ಜಗಳ ಇದ್ದಷ್ಟೂ ಚೆನ್ನವೇ. ಅಂತಹ ವಿರಸಗಳು ಸರಸವನ್ನು ಹೆಚ್ಚಿಸುವ ಟಾನಿಕ್!

*ಮಹಾವೀರ ಕಾಸಾರ, ಚನ್ನಗಿರಿ*
*ವಿರಹದಲ್ಲಿ ಬೇಯುತ್ತಿರುವ ಹೃದಯಕ್ಕೆ ಪರಿಹಾರವೇನು?*



ಮತ್ತೊಂದು ಕಾಲೇಜ್ ಕಾಂಪೌಂಡ್, ಮತ್ತೊಂದು ಹುಡುಗಿ, ಮತ್ತೊಂದು ಪ್ರೇಮ!

*ನೆ.ಸು. ಆನಂದ್, ಕತ್ತರಗುಪ್ಪ*
*ಆಚಾರವಂತನು ವಿಚಾರವಂತನಾಗುವುದು ಯಾವಾಗ?*
ಟಿವಿಯಲ್ಲಿ ಶಾಸ್ತ್ರ ಹೇಳುವ ಸ್ಲಾಟ್ ಸಿಕ್ಕಿದಾಗ! ಆಗ ಅವನು ಹೇಳಿದ್ದೇ ವಿಚಾರ, ಮಾಡಿದ್ದೇ ಆಚಾರ!

*ಎಂ.ಎಸ್. ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್*
*ಎಮ್ಮೆ ಓಡಾಡಿಕೊಂಡು ಮೇಯುತ್ತೆ, ಎಂ.ಎಲ್.ಎ. ಕುಳಿತೆಡೆಯೇ ಮೇಯುತ್ತಾನೆ. ಇದರ ಬಗ್ಗೆ ನಿಮ್ಮ ಅನಿಸಿಕೆ?*
ಹಾಗೇನಿಲ್ಲ; ಎಮ್ಮೆಲೆಗಳೂ ಈಗ ಚೆನ್ನೈ, ಗೋವಾ, ಪೂನಾಗಳಲ್ಲಿ ಓಡಾಡಿಕೊಂಡು ಮೇಯುತ್ತವೆ.

■ ರಾಮ್